**ಕರ್ನಾಟಕ ಲೋಕಾಯುಕ್ತ**

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\1334\2017\ಸನಿಕಾಸ-1

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:24/08/2017

**ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ**

**ವಿಷಯ:** ದೂರುದಾರರಾದ ಶ್ರೀ.ತ್ರಿಭುವನ್ ಬಿನ್ ನಾರಾಯಣ ಭಟ್, ಬ್ರಾಹ್ಮಣ ಬೇದೂರು ಗ್ರಾಮ, ಕಲ್ಮನೆ ಅಂಚೆ, ಸಾಗರ ತಾಲ್ಲೂಕ್, ಶಿವಮೊಗ್ಗ ಜಿಲ್ಲೆ ರವರ ದೂರನ್ನು ಪರಿಹರಿಸುವ ಬಗ್ಗೆ.

*******

ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕ್ ಕಲ್ಮನೆ ಅಂಚೆ ಬ್ರಾಹ್ಮಣ ಬೇದೂರು ಗ್ರಾಮದ ನಿವಾಸಿಯಾದ ಶ್ರೀ.ತ್ರಿಭುವನ್ ಬಿನ್ ನಾರಾಯಣ ಭಟ್ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕ್ ತಹಶೀಲ್ದಾರ್ ಶ್ರೀ.ತುಷಾರ ಬಿ ಹೊಸೂರ (ಇನ್ನು ಮುಂದೆ "ಎದುರುದಾರ" ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಕರ್ತವ್ಯ ಲೋಪದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-** ಸಾಗರ ತಾಲ್ಲೂಕ್ ಆವಿನಹಳ್ಳಿ ಹೋಬಳಿ ಬ್ರಾಹ್ಮಣ ಬೇದೂರು ಗ್ರಾಮದ ಸರ್ವೆ ನಂ.74ರಲ್ಲಿ ಸರ್ಕಾರಿ ಗೋಮಾಳವಿದ್ದು, ಸದರಿ ಜಮೀನನ್ನು ಶ್ರೀ.ರಾಘವೇಂದ್ರ ಬಿನ್ ಮಂಜಪ್ಪ, ಸನ್ಯಾಸಿಜಡ್ಡು ರವರು ಅತಿಕ್ರಮ ಪ್ರವೇಶ ಮಾಡಿದ್ದು, ಈ ಬಗ್ಗೆ ಸಿವಿಲ್ ನ್ಯಾಯಾಲಯದಲ್ಲಿ ಅಸಲು ಧಾವಾ ಸಂ:67/94ರಂತೆ ಸಲ್ಲಿಸಿ ಶಾಶ್ವತ ನಿರ್ಬಂಧಕಾಜ್ಞೆ ಪಡೆದಿದ್ದು, ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿ, ಶ್ರೀ.ರಾಘವೇಂದ್ರ ರವರು ಸದರಿ ಸ್ವತ್ತಿನಲ್ಲಿ ಮರಗಿಡಗಳನ್ನು ಕಡಿದು ವ್ಯವಸಾಯ ಮಾಡಲು ಪ್ರಯತ್ನಿಸುತ್ತಿದ್ದು, ಈ ಬಗ್ಗೆ ಎದುರುದಾರರಿಗೆ ದೂರು ನೀಡಿದ್ದರೂ ಸಹ ಯಾವುದೇ ಕ್ರಮ ಕೈಗೊಂಡಿಲ್ಲವೆಂದು ಹೇಳಿದ್ದಾರೆ.

3. ದೂರಿನ ಬಗ್ಗೆ ಎದುರುದಾರರಿಂದ ಆಕ್ಷೇಪಣೆಯನ್ನು ಕೇಳಲಾಗಿ, ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ-

ಸದರಿ ವಿಚಾರವಾಗಿ ರಾಜಸ್ವ ನಿರೀಕ್ಷಕರು ಆವಿನಹಳ್ಳಿ ರವರ ವರದಿಯಂತೆ ಸದರಿ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿ, ಸ್ಥಳದಲ್ಲಿದ್ದ ಗಿಡಮರಗಳನ್ನು ಕಡಿದು, ಸುಟ್ಟು ಹಾಕಿರುವ ಬಗ್ಗೆ ಕರ್ನಾಟಕ ಭೂ ಕಂದಾಯ ಕಾಯಿದೆ, ಕಲಂ 192ಎ ಅಡಿ ಒತ್ತುವರಿದಾರರಿಗೆ ನೋಟೀಸ್ ನೀಡಲಾಗಿದೆ. ಅದೇ ರೀತಿ, ಒತ್ತುವರಿಯನ್ನು ತೆರವುಗೊಳಿಸಲು ಆದೇಶ ಹೊರಡಿಸಲಾಗಿದೆ. ಆದರೆ, ರಾಜಸ್ವ ನಿರೀಕ್ಷಕರು ಒತ್ತುವರಿಯನ್ನು ತೆರವುಗೊಳಿಸಲು ಸ್ಥಳಕ್ಕೆ ಹೋದ ಸಂದರ್ಭದಲ್ಲಿ ಒತ್ತುವರಿದಾರರು ಉದ್ಧಟತನದಿಂದ ವರ್ತಿಸಿದ್ದು, ಆ ಕಾರಣ ಒತ್ತುವರಿದಾರರಾದ ಶ್ರೀ.ರಾಘವೇಂದ್ರ ಬಿನ್ ಮಂಜಪ್ಪ, ಬ್ರಾಹ್ಮಣ ಬೇದೂರು ಗ್ರಾಮ ರವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲು ಆದೇಶಿಸಿ, ಪ್ರಕರಣವನ್ನು ನೋಂದಾಯಿಸಿದೆಯೆಂದು ಹೇಳಿದ್ದಾರೆ.

4. ಎದುರುದಾರರ ಆಕ್ಷೇಪಣೆಗೆ ದೂರುದಾರರಿಂದ ಪ್ರತ್ಯುತ್ತರವನ್ನು ಕೇಳಲಾಗಿ, ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ –

ಸದರಿ ಜಮೀನಿಗೆ ಸಂಬಂಧಪಟ್ಟಂತೆ ಒತ್ತುವರಿದಾರರನ್ನು ತೆರವುಗೊಳಿಸಿಲ್ಲ. ಆದರೆ, ಒತ್ತುವರಿದಾರರ ಕ್ರಿಮಿನಲ್ ಪ್ರಕರಣವನ್ನು ಮಾತ್ರ ದಾಖಲಿಸಿದ್ದಾರೆ. ಆದ್ದರಿಂದ, ಎದುರುದಾರರ ವಿರುದ್ಧ ಕ್ರಮ ಜರುಗಿಸಲು ಕೋರಿದ್ದಾರೆ.

5. ಕಡತ ಮತ್ತು ದಾಖಲೆಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಕಂಡು ಬರುವ ಅಂಶಗಳೇನೆಂದರೆ:

ಸಾಗರ ತಾಲ್ಲೂಕ್ ಬ್ರಾಹ್ಮಣ ಬೇದೂರು ಗ್ರಾಮದ ಸರ್ವೆ ನಂ.74ರ ಸರ್ಕಾರಿ ಗೋಮಾಳವಿದ್ದು, ಸದರಿ ಜಮೀನಿನ ಬಗ್ಗೆ ಈ ಹಿಂದೆ 11 ಜನ ಸರ್ಕಾರದ ವಿರುದ್ಧ ಸಾಗರ ಪ್ರಧಾನ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂ:67/94ರಂತೆ ಪ್ರಕರಣ ದಾಖಲಿಸಿದ್ದು, ಸದರಿ ಪ್ರಕರಣ ಡಿಕ್ರಿಯಾಗಿದೆ. ಆ ನಂತರ, ಸದರಿ ಜಮೀನಿನಲ್ಲಿ ಶ್ರೀ.ರಾಘವೇಂದ್ರ ರವರು ಒತ್ತುವರಿ ಮಾಡಿ, ಸದರಿ ಸ್ವತ್ತಿನಲ್ಲಿ ಬೆಳೆದಿದ್ದ ಮರಗಿಡಗಳನ್ನು ಕಡಿದು ವ್ಯವಸಾಯ ಮಾಡುತ್ತಿದ್ದು, ಈ ಸಂಬಂಧವಾಗಿ ದೂರುದಾರರು ಎದುರುದಾರರ ಕಛೇರಿಗೆ ದೂರು ನೀಡಿದ ಸಂಬಂಧ ದಿ:13/04/14ರಂದು ಸದರಿ ಒತ್ತುವರಿಯನ್ನು ತೆರವುಗೊಳಿಸಿ, ಸರ್ಕಾರದ ವಶಕ್ಕೆ ಪಡೆದಿರುವುದು ಕಂಡು ಬಂದಿದೆ. ಈ ಬಗ್ಗೆ ಮಹಜರ್ ಪ್ರತಿಯಿದೆ. ಆ ನಂತರ, ಸದರಿ ಜಮೀನಿನಲ್ಲಿ ಶ್ರೀ.ರಾಘವೇಂದ್ರ ರವರು ಒತ್ತುವರಿ ಮಾಡಿ, ಸದರಿ ಸ್ವತ್ತಿನಲ್ಲಿ ಬೆಳೆದಿದ್ದ ಮರಗಿಡಗಳನ್ನು ಕಡಿದು ವ್ಯವಸಾಯ ಮಾಡುತ್ತಿದ್ದು, ಈ ಸಂಬಂಧವಾಗಿ ದೂರುದಾರರು ಎದುರುದಾರರ ಕಛೇರಿಗೆ ದೂರು ನೀಡಿದ್ದು, ಎದುರುದಾರರು ಆವಿನಹಳ್ಳಿ ರಾಜಸ್ವ ನಿರೀಕ್ಷಕರಿಗೆ ಸದರಿ ಒತ್ತುವರಿಯನ್ನು ತೆರವುಗೊಳಿಸುವಂತೆ ಆದೇಶಿಸಿದ್ದು, ಆ ಸಂದರ್ಭದಲ್ಲಿ ಒತ್ತುವರಿದಾರರು ಗಲಾಟೆ ಮಾಡಿದ ಕಾರಣ, ಕರ್ನಾಟಕ ಭೂ ಕಂದಾಯ ಅಧಿನಿಯಮ ಕಲಂ 192ಎ ಅಡಿ ಕ್ರಿಮಿನಲ್ ಪ್ರಕರಣ ದಾಖಲಿಸುವ ಬಗ್ಗೆ ಆರಕ್ಷಕ ಉಪ ನಿರೀಕ್ಷಕರು, ಗ್ರಾಮಾಂತರ ಠಾಣೆ, ಸಾಗರ ರವರಿಗೆ ನಿರ್ದೇಶನ ನೀಡಿದ್ದು, ಅದರಂತೆ ಒತ್ತುವರಿದಾರರ ವಿರುದ್ಧ ಸಾಗರ ಗ್ರಾಮಾಂತರ ಪೋಲೀಸ್ ಠಾಣೆ ಅಪರಾಧ ಸಂ:139/2017ರಂತೆ ಪ್ರಕರಣ ದಾಖಲಿಸಿರುವುದು ಕಂಡು ಬಂದಿದೆ. ಅದೇ ರೀತಿ, ಪ್ರಸ್ತುತ ಸದರಿ ಪ್ರಕರಣ ಚಾಲ್ತಿಯಲ್ಲಿರುವುದು ಕಂಡು ಬಂದಿದೆ. ಸದರಿ ಒತ್ತುವರಿಯ ಬಗ್ಗೆ

ಎದುರುದಾರರು ಈಗಾಗಲೇ ಕ್ರಮ ಕೈಗೊಂಡಿದ್ದಾರೆ. ದೂರುದಾರರು ಸದರಿ ಜಮೀನಿನಲ್ಲಿ ಎಷ್ಟು ವಿಸ್ತೀರ್ಣದ ಪ್ರದೇಶವನ್ನು ಒತ್ತುವರಿ ಮಾಡಿದ್ದಾರೆಂಬ ಬಗ್ಗೆ ಸ್ಪಷ್ಟವಾಗಿ ತಿಳಿಸಿಲ್ಲ.

6. ಆದ್ದರಿಂದ, ಸದರಿ ಜಮೀನಿನಲ್ಲಿ ಒತ್ತುವರಿ ಮಾಡಿದ ಶ್ರೀ.ರಾಘವೇಂದ್ರ ಬಿನ್ ಮಂಜಪ್ಪ ರವರಿಂದ ಜಮೀನನ್ನು ಸರ್ಕಾರದ ವಶಕ್ಕೆ ಪಡೆದುಕೊಳ್ಳುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(1)ರ ಅಡಿ ಪ್ರದತ್ತವಾದ ಅಧಿಕಾರದಡಿ, ಈಗ, ಈ ವರದಿ ಮೂಲಕ, ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ.

7. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 24/8/17.

(ನ್ಯಾಯಾಮೂರ್ತಿ ಸುಭಾಷ್ ಬಿ ಅಡಿ)
ಉಪಲೋಕಾಯುಕ್ತ-2,
ಕರ್ನಾಟಕ ರಾಜ್ಯ.